‘ಮಾವ ಮೊದ್ಲಿಂದಾನೂ ಹಂಗೇಯೋ’?

‘ಇಲ್ಯೆ, ಯಾವಾಗ ಬಾಟ್ಕೆ ಸಹವಾಸ ಶುರು ಆತು ನೋಡು. ಆವಾಗಿಂದ ಅವರ ವ್ಯವಹಾರಾನೇ ಬದ್ಲ ಆಗೋತು.ಮೇಳಕ್ಕೆ ಹೋಗ್ತವಲೆ. ಯಾವ ಯಾವ ನಮ್ನಿ ಜನ್ರ ಸಹವಾಸ ಆಗ್ತೊ ಯಾರೀಗ ಗೊತ್ತು.’

‘ಆದ್ರೆ ಅಂವ ವೇಷ ಕಟ್ಟದಾಗ ರಾಶೀನೆ ಚಂದ ಕಾಣ್ತ. ಅವನ ಕುಣ್ತವ್ರೊ,ಮಾತುಗಾರಿಕೆಯೋ ಈಗೂ ಹೆಣ್ಣ ಮಕ್ಳ ಮರಳು ಮಾಡ್ವಾಂಗಿದ್ದ. ಅಂವಂಗೆ ಕಿರೀಟದ ವೇಷ ವಪ್ಪದಾಂಗೆ ಯಾರಿಗು ವಪ್ಪತಿಲ್ಲೆ ತಗ. ಆದರೆ, ಎಲ್ಲಾ ಬಣ್ಣನೂ ಮಶಿ ನುಂಗ್ತು ಹೇಳದಾಂಗೆ ಆತು ಅವನ ಶಿಟ್ಟು.’ಮೀನಾಕ್ಷಿ ಎಂದಳು.

ಮೀನಾಕ್ಷಿ ಎಂದಳು. ಮೀನಾಕ್ಷಿಗೆ ದೇವರು ಮಾವನ ಕುಣಿತವೆಂದರೆ ಅಚ್ಚು-ಮೆಚ್ಚು. ಆ ಮಟ್ಟಿಗೆ ಅವನಿಗೆ ಯಾರೂ ಸಾಟಿಯಿಲ್ಲ.ಅಲ್ಲೇ ಇದ್ದ ಪರಮಣ್ಣ ಮದವೆ ಅಂದ್ರೆ ಲಾಟ್ರಿ ತಗ, ಲಕ್ಕ್ ಹೊಡದ್ರೆ ಚಲೋನೇ ಹೊಡೀತು’ ಎಂದ. ‘ಲಾಟ್ರಿಯಡ, ಲಾಟ್ರಿ. ಅದ್ಕೇ ನೀನು ಮದ್ವೆ ಕಂಡಿದ್ದಿಲ್ಲೆ ಎಂದಳು. ‘ಮೀನಾಕ್ಷಿಗೆ ಒಳ್ಳೆ ಜರ್ನ ಗಂಡನೇ ಸಿಗಕಾಯ್ತು, ಅಂವ ನೋಡೀರೆ ಪಾಪದವ. ಇದ ನೋಡೀರೆ ಉರಿ ಮೆಣಸು’ ಎಂದ ಪರಮಣ್ಣ. ‘ಯನ್ನ ಬಾಯಿ ತೆಗಸಡ ನೋಡು. ಕಡೀಗೆ ಮೀನಾಕ್ಷಿ ಹೀಂಗ ಹೇಳ್ತು ಹೇಳೂದ ಬೇಡ’. ಜಗಳಕ್ಕೇ ಬಂದಳು ಮೀನಾಕ್ಷಿ. ಮೀನಾಕ್ಷಿಯ ಬಾಯಿಗೆ ಹೆದರಿದ ಪರಮಣ್ಣ ಪಾಯಸ ತೊಳಸುವ ನೆಪದಲ್ಲಿ ಆಚೆ ಹೋದ.

ಸಂಜೆ ನಾಲ್ಕು ಘಂಟೆಗೆಲ್ಲಾ ದಿನವಿಡೀ ಗಿಜಿಗುಡುತ್ತಿದ್ದ ಮದುವೆ ಮನೆ ಖಾಲಿ ಖಾಲಿ. ಮದುಮಗಳ ಕಡೆಯವರೆಲ್ಲಾ ಒಬ್ಬೊಬ್ಬರಾಗಿ ಹೊರಟರು. ಕಡೆಗೆ ತಂದೆ-ತಾಯಿ ಹೊರಡುವಾಗ ಹುಡುಗಿಗೆ ತಡೆಯಲಾಗಲಿಲ್ಲ. ತಾಯಿಯನ್ನು ತಬ್ಬಿಕೊಂಡು ‘ಆಯೀ’ ಎಂದು ಬಿಕ್ಕಿದಳು. ತಾಯಿಗೂ ಮಾತು ಹೊರಡಲಿಲ್ಲ. ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆದು ‘ನಾಳೆ ಬನ್ನಿ’ ಎಂದಳು. ತಂದೆ ಇದನ್ನು ನೋಡಿಯೂ ನೋಡದಂತೆ ‘ತಂಗೀ ನಾಳೆ ಬೆಳಿಗ್ಗೇನೇ ಹೊರಟು ಬನ್ನಿ’ ಎನ್ನುತ್ತಾ ಗಾಡಿ ಹತ್ತಿದ. ಅಂಗಳದ ತುದಿಯವರೆಗೆ ಹೋಗಿ ತವರಿನವರನ್ನು ಕಳಿಸಿ ಒಳಬಂದ ಪೂರ್ಣಿಮಾಳಿಗೆ ಗಂಟಲು ಉಬ್ಬಿ ಯಾರೊಡನೆಯೂ ಮಾತಾಡುವ ಮನಸ್ಸಾಗಲಿಲ್ಲ. ಸುಂದರವಾಗಿ ಕಟ್ಟಿದ ಹೂವಿನ ಮಂಟಪದ ಹೂಗಳೆಲ್ಲಾ ಬಾಡಿ ಬಸವಳಿದಿದ್ದವು. ಬಾಡಿದ ಬಾಳೆ ಕಂಭ, ಸುತ್ತಲೂ ಹರಡಿಬಿದ್ದ ಅಕ್ಷತೆ, ಮುದುಡಿಬಿದ್ದ ಜಮಕಾನಾ,ಚೆಲ್ಲಾಪಿಲ್ಲಿ ಹರಡಿದ ಕುರ್ಚಿಗಳು. ಇನ್ನೇನು ಕಣ್ಣಿಂದ ಹನಿ ಜಾರಬೇಕು. ಕರ್ಚೀಪಿನಿಂದ ಒರೆಸಿಕೊಂಡಳು. ಅವಳ ಗಂಡ ಇದನ್ನೆಲ್ಲಾ ಗಮನಿಸುತ್ತಿದ್ದವ ಪೂರ್ಣಿಮಾಳನ್ನು ಕರೆದು, ‘ನಿನ್ನ ಅತ್ತೆಯನ್ನೂ ಕರೆ,ಇಲ್ಲೇ ಹೊಸದಾಗಿ ಹಾಕಿದ ತೋಟವಿದೆ. ನೋಡಿಕೊಂಡು ಬರುವಾ’ ಎಂದು ಕರೆದ. ಪೂರ್ಣಿಮಾ ಅತ್ತೆಯನ್ನು ಕರೆಯುತ್ತೇನೆಂದು ಒಳಗೆ ಹೋದಳು. ಗಂಗೆ, ಸುಬ್ಬಿ,ಮೀನಾಕ್ಷಿ, ಪರಮಣ್ಣ ಎಲ್ಲರೂ ಹೊರಟು ನಿಂತಿದ್ದರು. ಪರಮಣ್ಣ ಸುಧಾಕರನನ್ನು ನೋಡಿ,’ಬೀಗರು ಮನೆ ಮುಟ್ಟೂಲೆ ಹತ್ತೊ ಹತ್ತೂವರೆಯೋ’ ಎಂದ. ‘ಹಾಂ ಹತ್ತುಘಂಟೆಯೇ ಆಗಲಕ್ಕು ಕುಂದಾಪುರಕ್ಕಿಂತ ಮುಂದೆ’. ಎಂದ ಸುಧಾಕರ. ‘ಅಲ್ದೋ ಮಾರಾಯನೆ, ಕೂಸ್ ಹುಡ್ಕಿದ್ದಾರು ಸಾಕು. ಅಷ್ಟ ದೂರದ ಸಂಬಂಧ ಅದ್ ಹೇಂಗೆ ಕುರ್ತೋ ಮಾರಾಯಾ’ ಎಂದಾಗ ಗಂಗೆ ‘ ಮದ್ವೆಯೆಲ್ಲಾ ಸ್ವರ್ಗದಲ್ಲೇ ಆಗಿರ್ತಡ’ ಎಂದು ತನ್ನ ಮಾತಿಗೆ ತಾನೇ ಶಾಬಾಸ್ ಕೊಟ್ಟಂತೇ ನಕ್ಕಳು.

ಅದೇ ಹೊತ್ತಿಗೆ ದೇವರೂ ಭಟ್ಟನ ಪ್ರವೇಶ ಆಯಿತು. ಅಂವ ಎಂದಿನಂತೇ ಹಾಸ್ಯ ಚಟಾಕಿ ಹಾರಿಸುತ್ತಲೇ ಬಂದ. ಯಕ್ಷಗಾನದ ವೇಷವೊಂದಿಲ್ಲ, ಅಷ್ಟೆ. ‘ಸಾರಸ ನಯನೆ ಕೇಳೆ , ಕಮಲಮುಖಿ, ಚಾರು, ರೂಪೆ ,ಸಂಪನ್ನೆ’ ಯಾರು ನಿನ್ನಯ ಪುರುಷ ಹೇಳುವಂತವಳಾಗು ಎಂದು ಸಾಭಿನಯದಿಂದಲೇ ಮದುವೆ ಚಪ್ಪರ ಪ್ರವೇಶಿಸಿದ. ಆದರೆ, ಮದುವಣಗಿತ್ತಿಯೇ ಇರಲಿಲ್ಲ. ಇದೇ ಸಮಯವೆಂದು ಮೀನಾಕ್ಷಿ ‘ನಿನ್ನ ಸಾರಸನಯನೆ ಗಂಗತ್ತೆ ಇಲ್ಲೇ ಇದ್ದು ನೋಡು. ‘ಅನು ಕರಕಂಡು ಹೋಪನ ಹೇಳಿ ಬಂದೆ . ನೆಡಿಯೂಲೆ ದೂರ. ಬಸ್ಸಿಲ್ಲೆ. ಪಾಪ ಯಂತ ಮಾಡೂದು.’ ಎಂದ .ಗಂಗೆಗೆ ಕಾಲು ನೋವು ಆಗೇ ಇಲ್ಲವೇನೋ ಎನಿಸಿಬಿಟ್ಟಿತು. ತುಟಿಯಂಚಿನಲ್ಲಿ ಕಿರುನಗೆ ,ಕಣ್ಣ ಅಂಚಿನಲ್ಲಿ ಜಿನುಗಿದ ನೀರು. ಮೀನಾಕ್ಷಿಯ ಕಡೆ ತಿರುಗಿ ‘ಇದ್ಕೆ ಹೇಳೂದು ಸಂಸಾರ ಹೇಳಿ’ ಎಂದಳು. ಈ ಸಾರೆ ದೇವರೂ ಮಾವ ಸಿಕ್ಕರೆ ಸರಿಯಾಗಿ ಬೈಯಬೇಕೆಂದುಕೊಂಡ ಮೀನಾಕ್ಷಿಗೆ ಆ ಕ್ಷಣದಲ್ಲಿ ಎಲ್ಲವೂ ಮರೆತೇಹೋಯಿತು.

●